ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ **20-02-2024**

ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ ಹೆಚ್ ಎಸ್ ಎಮ್ ವಕೀಲರಿಂದಃ

ದಾವಾ ಆಸ್ತಿಗಳು ಮೂಲತಃ ಮೊಂಟ ಪೂಜಾರಿಯವರಿಗೆ ಸೇರಿದವರಿಗಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳು ನನ್ನ ಅಜ್ಜಿ ಮೀನಕ್ಕ ಪುಜಾರ್ತಿ ಯವರಿಗೆ ಭೂನ್ಯಾಯಾ ಮಂಡಳಿಯಲ್ಲಿ ಅನುಭೋಗದ ಹಕ್ಕಿಗೆ ನೀಡಲಾಗಿರುತ್ತದೆ. ಮೂಲ ದಾವಾ ಸಂಖ್ಯೆ 89/2004 ರ ತೀರ್ಪಿನ ಪ್ರಕಾರ ನನ್ನ ಅಜ್ಜಿ ಮೀನಕ್ಕ ಪೂಜಾರ್ತಿ ಯವರ ಹೆಸರಿಗೆ ಸದರಿ ಆಸ್ತಿಗಳು ಬಂದಿರುತ್ತದೆ. ಮೂಲ ದಾವಾ ಸಂಖ್ಯೆ 89/2004 ರ ಡಿಕ್ರಿಯ ಪ್ರಕಾರ ಕೆಲವು ಆಸ್ತಿಗಳನ್ನು ಪ್ರತಿವಾದಿಯ ಹೆಸರಿಗೆ ನೀಡಲಾಗಿತ್ತು. ಮೀನಕ್ಕ ಪೂಜಾರ್ತಿ ಯವರ ಹೆಸರಿಗೆ ಬಂದ ಆಸ್ತಿಗಳು ಹಾಗೂ ಪ್ರತಿವಾದಿಯವರ ಹೆಸರಿಗೆ ಬಂದ ಆಸ್ತಿಗಳು ಒಂದಕ್ಕೊಂದು ತಾಗಿಕೊಂಡಿರುತ್ತವೆ. ಯಾವ ಯಾವ ಆಸ್ತಿಗಳು ಬಂದಿರುತ್ತವೆ ಎಂದು ನಕ್ಷೆ ಮಾಡಲಾಗಿರುತ್ತದೆ. ಸದರಿ ನಕ್ಷೆ ನನ್ನ ಬಳಿ ಇದೆ. ಈಗ ನನಗೆ ತೋರಿಸಿದ ನಕ್ಷೆ ಸದರಿ ಮೂಲ ದಾವಾ ಸಂಖ್ಯೆ 89/2004 ಗೆ ಲಗತ್ತಿಸಿದ ನಕ್ಷೆಯಾಗಿರುತ್ತದೆ. ಅದನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ಮೀನಕ್ಕ ಪೂಜಾರ್ತಿಯವರ ಹೆಸರಿಗೆ ಬಂದ ಆಸ್ತಿಗಳನ್ನು ನಿಪಿ-1 ರ ಪ್ರಕಾರ ನನ್ನ ಅಜ್ಜಿ ನನಗೆ ನೀಡಿರುತ್ತಾರೆ. ಸದರಿ ಕೋರ್ಟ್ ಡಿಕ್ರಿಯ ಪ್ರಕಾರ ಮೀನಕ್ಕ ಪೂರ್ಜಾತಿಯವರಿಗೆ ಹಿಸ್ಸೆಗೆ ಬಂದ ಆಸ್ತಿ ಹಾಗೂ ಪ್ರತಿವಾದಿಯವರ ಹಿಸ್ಸೆಗೆ ಬಂದ ಆಸ್ತಿ ಅವರವರ ಸ್ವಾಧೀನದಲ್ಲಿರುತ್ತದೆ. ದಾವಾ ಆಸ್ತಿಗಳ ಸಮೀಪದಲ್ಲಿ ಹೆಬ್ರಿಯಿಂದ

ಸೀತಾನದಿಗೆ ಸಂಪರ್ಕ ಕಲ್ಪಿಸುವ ಪಂಚಾಯತ್ ರಸ್ತೆ ಇದೆ. ದಾವೆ ಮಾಡುವ ಪೂರ್ವದಲ್ಲಿ ಸದರಿ ಪಂಚಾಯತ್ ರಸ್ತೆಯಿಂದ ಪ್ರತಿವಾದಿಯವರ ಮನೆಗೆ ಹೋಗಲು ಮತ್ತು ನಮ್ಮ ಮನೆಗೆ ಹೋಗಲು ಅದೇ ರಸ್ತೆ ಇತ್ತು ಎಂದರೆ ಸರಿಯಲ್ಲ ಬೇರೆ ರಸ್ತೆ ಇತ್ತು.

ದಾವೆ ಮಾಡುವ 1 ವರ್ಷದ ಪೂರ್ವದಲ್ಲಿ ಪ್ರತಿವಾದಿಯವರು ಅವರ ಆಸ್ತಿಯ ಅನುಭೋಗಕ್ಕೆ ಅಡ್ಡಿ ಪಡಿಸಿರುತ್ತಾರೆ ಎಂದು ನನ್ನ ಹಾಗೂ ನನ್ನ ಗಂಡನ ವಿರುದ್ಧ ಹೆಬ್ರಿ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿ ಮುಂದುವರಿದು ಬೇರೆ ವಿಷಯಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ದಾವೆ ಮಾಡುವ ಪೂರ್ವದಲ್ಲಿ ಪ್ರತಿವಾದಿಯವರ ಆಸ್ತಿಯ ಅನುಭೋಗಕ್ಕೆ ಅಡ್ಡಿಪಡಿಸುತ್ತಿದ್ದೆ ಎಂದರೆ ಸರಿಯಲ್ಲ.

ಈ ದಾವೆ ದಾಖಲಾದ ಮೇಲೆ ದಾವೆಯಲ್ಲಿ ಏಕಪಕ್ಷೀಯ ತಡೆಯಾಜ್ಞೆ ನೀಡಿದ ನಂತರ ನಾನು ಪ್ರತಿವಾದಿಯವರ ಜಾಗದ ಬೇಲಿಯನ್ನು ಕಿತ್ತು ಬಿಸಾಕಿರುತ್ತೇನೆ ಎಂದು ನನ್ನ ವಿರುದ್ಧ ಪ್ರತಿವಾದಿಯು ಹೆಬ್ರಿ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ನಾನು ಠಾಣೆಗೆ ತಡೆಯಾ್ತೆ ಆದೇಶದ ಪ್ರತಿಯನ್ನು ಹಾಜರುಪಡಿಸಿರುತ್ತೇನೆ. ಆನಂತರ ಪೋಲಿಸರು ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿ ಇರುವುದರಿಂದ ಅಲ್ಲಿಯೇ ಬಗೆಹರಿಸಿಕೊಳ್ಳಬೇಕು ಎಂದು ದೂರಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸರಿ.

ಮೀನಕ್ಕ ಪೂಜಾರ್ತಿ ವಾಸ ಇರುವ ಮನೆ ನಮ್ಮ ಹಿರಿಯರ ಮನೆ. ಆ ಮನೆಯಲ್ಲಿ ಕುಟುಂಬದ ದೈವ ದೇವರುಗಳು ಇವೆ. ಸದರಿ ದೈವಗಳಿಗೆ ಪ್ರತಿವಾದಿಯವರು ಪೂಜೆ ಸಲ್ಲಿಸುತ್ತಾರೆ. ಸದರಿ ದೈವ ದೇವರುಗಳು ಇರುವ ಮನೆ ಪ್ರತಿವಾದಿ ಮನೆಯಿಂದ 500 ಮೀ ದೂರದಲ್ಲಿ ಇದೆ. ಸದರಿ ಮನೆಗೆ ಬರುವಾಗ ಪ್ರತಿವಾದಿಯು ನಮ್ಮ ಜಮೀನಿನ ಮೂಲಕವೇ ಬರುತ್ತಿದ್ದರು.

ಪ್ರತಿವಾದಿಯು ಸುಮಾರು 20 ವರ್ಷಗಳಿಂದ ದೈವದ ಪೂಜೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಈ ದಾವೆಯಲ್ಲಿ ತಡೆಯಾಜ್ಞೆ ನೀಡಿದ ನಂತರ ಅವರು ಬರುತ್ತಿಲ್ಲ. ಪ್ರತಿವಾದಿಯವರ ಮನೆಗೆ ಹೋಗಲು ಗೇಟನ್ನು ಅಳವಡಿಸಿ ಪ್ರತ್ಯೇಕ ರಸ್ತೆಯನ್ನು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಾವೆ ಮಾಡಿದ ನಂತರ ನಾನು ಪ್ರತಿವಾದಿಯವರ ಜಮೀನಿನ ಬೇಲಿಯನ್ನು ಕಿತ್ತು ಬಿಸಾಡಿ ಇಲ್ಲಿಯವರೆಗೂ ಹಾಕಲು ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನನ್ನ ಆಸ್ತಿಯ ಸ್ವಅನುಭೋಗಕ್ಕೆ ಯಾವುದೇ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಪ್ರತಿವಾದಿಯವರ ಜಾಗಕ್ಕೆ ಅಡ್ಡಿಪಡಿಸಿ ಆನಂತರ ಪ್ರತಿವಾದಿಯವರು ಪೋಲಿಸ್ ಠಾಣೆಗೆ ದೂರು ನೀಡಿ ಸದರಿ ಪೋಲಿಸರು ನನಗೆ ಎಚ್ಚರಿಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ ಹಾಗೂ ಸದರಿ ಕಾರಣಕ್ಕಾಗಿ ನಾನು ಈ ದಾವೆಯನ್ನು ಪ್ರತಿವಾದಿಯವರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸುವ ಕಾರಣಕ್ಕಾಗಿ ಪ್ರತಿವಾದಿಯ ವಿರುದ್ಧ ಸುಳ್ಳು ಆರೋಪವನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಈ ದಾವೆಯನ್ನು ನಾನು ದಾಖಲಿಸಿದ ನತಂರ ಪ್ರತಿವಾದಿಯು ನನ್ನ ವಿರುದ್ಧ ದಾವೆ ಸಂಖ್ಯೆ 152/21 ದಾಖಲಿಸಿರುತ್ತಾರೆ ಎಂದರೆ ಸರಿ. ಅಲ್ಲದೇ ನನ್ನ ವಿರುದ್ಧ ತಡೆಯಾಜ್ಞೆ ಕೋರಿರುತ್ತಾರೆ ಎಂದರೆ ಸರಿ. ನಿಪಿ.9 ರಲ್ಲಿ ಕಾಣುವ ಮನೆ ಪ್ರತಿವಾದಿಯವರದಾಗಿರುತ್ತದೆ ಮತ್ತು ಅಲ್ಲಿ ಕಾಣುವ ರಸ್ತೆ ನನ್ನ ಆಸ್ತಿಯಲ್ಲಿರುವ ರಸ್ತೆಯಾಗಿರುತ್ತದೆ. ಪ್ರತಿವಾದಿಯವರ ವಿರುದ್ಧ ಯಾವುದೇ ಸಕಾರಣ ಇಲ್ಲದೇ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಪ್ರತಿವಾದಿ ನನ್ನ ಜಾಗಕ್ಕೆ ಬರುತ್ತಿಲ್ಲ. ಪ್ರತಿವಾದಿ ನನ್ನ ದಾವಾ ಆಸ್ತಿಯ ಸ್ವಅನುಭೋಗಕ್ಕೆ ಯಾವುದೇ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಕೇಳಿದ ಯಾವುದೇ ನಿವೃತಿ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ